ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.

ಸಿ.ಸಿ.ಸಂಖ್ಯೆ: 151/2023

ಪಿ ಡಬ್ಲ್ಯೂ: 5

ಸಿ ಡಬ್ಲ್ಯೂ: 4

| | | |
|---|---|---|
| ಸಾಕ್ಷಿಯ ಹೆಸರು | : | ಹನುಮಂತ |
| ತಂದೆಯ ಹೆಸರು | : | ನಾಗಪ್ಪ |
| ವಯಸ್ಸು | : | 42 |
| ಉದ್ಯೋಗ | : | ಅಬಕಾರಿ ಉಪನಿರೀಕ್ಷಕರು, ಹುಬ್ಬಳ್ಳಿ ವಲಯ |
| ವಾಸಸ್ಥಳ | : | ಹುಬ್ಬಳ್ಳಿ |

ದಿನಾಂಕ: 16.03.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:</u>**

ದಿನಾಂಕ 28-10-2011 ರಿಂದ 12-07-2024 ರ ವರೆಗೆ ಪಿರ್ಯಾದಿ ಕಚೇರಿಯಲ್ಲಿ ಅಬಕಾರಿ ಮುಖ್ಯಪೇದೆಯಾಗಿ ಕಾರ್ಯನಿರ್ವಹಿಸಿರುತ್ತೇನೆ.

2. ದಿನಾಂಕ 11.04.2024 ರಂದು ಲೋಕಸಭಾ ಚುನಾವಣೆ ನಿಮಿತ್ತ ರಾತ್ರಿ 07-00 ಗಂಟೆ ಸುಮಾರಿಗೆ ಮೆಡ್ಲೇರಿ ಗ್ರಾಮದಲ್ಲಿ ನಾನು ಮತ್ತು ಚಾ ಸಾ 1 ರವರು ಗಸ್ತು ಮಾಡುತ್ತಿದ್ದಾಗ, ಮೆಡ್ಲೇರಿ ಬಸ್ ನಿಲ್ದಾಣದ ಹತ್ತಿರ ಒಬ್ಬ ವ್ಯಕ್ತಿಯು ಒಂದು ಪ್ಲಾಸ್ಟಿಕ್ ಚೀಲವನ್ನು ಹಿಡಿದುಕೊಂಡು ಅನುಮಾಸ್ಪದವಾಗಿ ನಿಂತಿದ್ದು, ಆತನನ್ನು ವಿಚಾರಿಸಲು ಹೋದಾಗ ಆತನು ಸದರಿ ಚೀಲದಲ್ಲಿ ಮದ್ಯದ ಟೆಟ್ರಾ ಪ್ಯಾಕೆಟ್ಗಳು ಇರುವುದಾಗಿ ತಿಳಸಿದ್ದು ನಂತರ ಅಲ್ಲಿಯೇ ಚಾಸಾ 2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರವನ್ನು ವರದಿಯನ್ನು ತಯಾರಿಸಿ ಚೀಲವನ್ನು ಶೋಧನೆ ಮಾಡಿದಾಗ ಸದರಿ ಚೀಲದಲ್ಲಿ 90 ಮಿಲಿಯ 144 ಹೆಚ್.ಸಿ. ವಿಸ್ಕಿ ಟೆಟ್ರಾ ಪ್ಯಾಕೆಟ್ ಹಾಗೂ 90 ಮಿಲಿಯ 10 ಮ್ಯಾಕಿನ್ ಟೋಶ್ ವಿಸ್ಕಿಯ ಟೆಟ್ರಾ ಪ್ಯಾಕೆಟ್ ಗಳು ದೊರೆತಿದ್ದು ಅವುಗಳ ಮೇಲಿನ ಭದ್ರತಾ ಚೀಟಿಗಳನ್ನು ಹರಿದು ಹಾಕಲಾಗಿತ್ತು. ಅವುಗಳನ್ನು ಪಂಚರ ಸಮಕ್ಷಮ ಅಮಾನತುಪಡಿಸಿಕೊಳ್ಳಲಾಯಿತು.

4. ದೊರೆತ ಮದ್ಯದ ಟೆಟ್ರಾ ಪ್ಯಾಕ್ ಗಳಲ್ಲಿ 30 ಟೆಟ್ರಾ ಪ್ಯಾಕೆಟ್ಗಳನ್ನು ರಾಸಾಯನಿಕ

ವಿಶ್ಲೇಷಣಾ ಪರೀಕ್ಷೆಗಾಗಿ ಮಾದರಿಯಾಗಿ ಪ್ರತ್ಯೇಕಿಸಿ ಒಂದು ಬಿಳಿ ಬಟ್ಟೆಯಲ್ಲಿ ಹಾಕಿ ದಾರದಿಂದ ಹೊಲೆದು ಸೀಲ್ ಮಾಡಿ ಸಂಖ್ಯೆ 566 ರಂತೆ ಇಲಾಖಾ ಮೊಹರು ಮಾಡಲಾಯಿತು. ಸ್ಥಳದಲ್ಲಿ ಮಾದರಿ ಚೀಟಿಗಳನ್ನು ತಯಾರಿಸಿ ಅದಕ್ಕೆ ಅಂಟಿಸಿ ನಾನು ಹಾಗೂ ಸಾಕ್ಷಿದಾರರು ಸಹಿ ಮಾಡಿದೆವು. ಪಂಚನಾಮೆಯನ್ನು ಸಂಜೆ 07–20 ರಿಂದ 8–30 ರವರೆಗೆ ಜರುಗಿಸಿ, ವರದಿಯನ್ನು ಚಾಸಾ 1 ರವರು ಬರೆದಿರುತ್ತೇನೆ. ಅದನ್ನು ಓದಿ ಹೇಳಿದ ನಂತರ ಚಾಸಾ 2 ಮತ್ತು 3 ರವರ ಸಹಿ ಪಡೆದುಕೊಂಡು ನಾನು ಮತ್ತು ಚಾಸಾ 1 ರವರು ಸಹಿ ಮಾಡಿರುತ್ತೇವೆ.

5. ಸದರಿ ಜಪ್ತಾದ ಮದ್ಯದೊಂದಿಗೆ ಠಾಣೆಗೆ ಬಂದು ಸ್ವ ದೂರು ಸಿದ್ಧಪಡಿಸಿ ಆರೋಪಿಯ ವಿರುದ್ಧ ಚಾ ಸಾ 1 ರವರು ಪ್ರಕರಣ ದಾಖಲಿಸಿರುತ್ತಾರೆ. ಆರೋಪಿಗೆ ವಿಚಾರಣೆಗೆ ಹಾಜರಾಗಲು ಸಿ ಆರ್ ಪಿ ಸಿ ಕಲಂ 41(ಎ) ರೀತ್ಯ ನೋಟಿಸ್ ನೀಡಲಾಯಿತು. ದಿನಾಂಕ 02.06.2024 ರಂದು ಮುದ್ದೆ ಮಾಲುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಎಫ್ ಎಸ್ ಎಲ್ ಧಾರವಾಡಕ್ಕೆ ತೆಗೆದುಕೊಂಡು ಹೋಗಿ ದಿನಾಂಕ 22.06.2024 ರಂದು ಪುನಃ ವರದಿಯನ್ನು ತಂದು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಈ ಮೇಲಿನ ವಿಷಯದ ಕುರಿತು ದಿನಾಂಕ 26.06.2024 ರಂದು ಹೇಳಿಕೆ ನೀಡಿರುತ್ತೇನೆ. ಆ ಕುರಿತು ನನ್ನ ಹೇಳಿಕೆಯನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ.

6. ಸಾಕ್ಷಿಯು ನಿಪಿ 2 ರ ಪಂಚನಾಮೆಯಲ್ಲಿನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು **ನಿಪಿ 2 ಡಿ** ಎಂದು ಗುರುತಿಸಲಾಯಿತು. ಸಾಕ್ಷಿದಾರರು ಮಾದರಿ ಮದ್ಯ ಹಾಗೂ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಪಂಚನಾಮೆಯ ಕಾಲಕ್ಕೆ ಸಿಲು ಮತ್ತು ದಾರಗಳು ತೆಗೆದುಕೊಂಡು ಹೋಗಿರುವ ಕುರಿತು ಹೇಳಿಕೆಯಲ್ಲಿ ಬರೆಸಿಲ್ಲ ಎಂದರೆ ಸರಿ. ಯಾವ ಮಾರ್ಗದ ಮೂಲಕ ಗುನ್ನಾ ಜಾಗಕ್ಕೆ ತಲುಪಿರುತ್ತೇವೆ ಎಂದು ಸಹ ಬರೆಸಿರುವುದಿಲ್ಲ ಎಂದರೆ ಸರಿ. ಗುನ್ನಾ ಜಾಗಕ್ಕೆ ಹೊರಟ ಸಮಯವನ್ನು ಬರೆಸಿರುವುದಿಲ್ಲ ಎಂದರೆ ಸರಿ. ಪಂಚರಿಗೆ ಮಾಹಿತಿಯನ್ನು ನೀಡಿರುವ ಕುರಿತು ನನ್ನ ಹೇಳಿಕೆಯಲ್ಲಿ ಬರೆಸಿರುವುದಿಲ್ಲ ಎಂದರೆ ಸರಿ. ದಾಳಿಯ ಸಮಯದಲ್ಲಿ ಯಾವುದೇ ಪೋಟೋ ತೆಗೆದುಕೊಂಡಿರುವುದಿಲ್ಲ. ಆ ಕಾಲಕ್ಕೆ ಪೋಟೋ ತೆಗೆಯಲು ಯಾವುದೇ ತೊಂದರೆ ಇರಲಿಲ್ಲ. ಪಂಚರ ಹೆಸರನ್ನು ಪಂಚನಾಮೆಯಲ್ಲಿ ತಿಳಿಸಿದ್ದು ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಯಾವುದೇ ದಾಳಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಗೂ ಮತ್ತು ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.

ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.